**ಮಧ್ಯಂತರ ಅರ್ಜಿ ಆದೇಶ ಸಂಖ್ಯೆ-4 ದಿನಾಂಕ 29-12-2023 ರ ಆದೇಶದ ಮೇರೆಗೆ ಸಾಕ್ಷಿಗೆ ದಿನಾಂಕ 12-01-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**1 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ**

ನಾನು ಅಪಘಾತದ ಪೂರ್ವದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. ನಾನು ವೆಂಕಟೇಶ ಸ್ವಾಮಿರವರ ಲಾರಿಗೆ ಚಾಲಕನಾಗಿ ಕೆಲಸ ಮಾಡುತ್ತಿದ್ದೆ. ನನ್ನ ವಾಹನ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈಗ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಈಗ ನಾನು ಚಾಲಕ ಕೆಲಸ ಮಾಡುತ್ತಿಲ್ಲ. ನನ್ನ ಕೈಯ ನಾಲ್ಕು ಬೆರಳುಗಳು (ಹೆಬ್ಬೆರಳನ್ನು ಹೊರತುಪಡಿಸಿ) ಮತ್ತು ಅರ್ಧ ಹಸ್ತ ಕತ್ತರಿಸಿ ಹೋದ ಕಾರಣ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ನನ್ನ ವಾಹನ ಚಾಲನಾ ಪರವಾನಿಗೆ ಪತ್ರವನ್ನು ರದ್ದುಪಡಿಸಲು RTO ಕಚೇರಿರವರಿಗೆ ಅರ್ಜಿ ನೀಡಿಲ್ಲ. ಸಾಕ್ಷಿ ಮುಂದುವರೆದು ಅರ್ಜಿ ನೀಡಿಲ್ಲ ಆದರೆ ನೀಡಿ ಅಂತಾ ಹೇಳಿದರೆ ನೀಡುತ್ತೇನೆ ಅಂತಾ ಹೇಳುತ್ತಾರೆ.

ಸದರಿ ವೆಂಕಟಸ್ವಾಮಿರವರ ಬಳಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನನಗೆ ಪ್ರತಿ ತಿಂಗಳು ರೂ.25,000/- ಸಂಬಳ ಹಾಗೂ ಪ್ರತಿದಿನ ರೂ.500/- ಭತ್ಯೆ ನೀಡುತ್ತಿದ್ದರು. ನನಗೆ ಲಾರಿ ಮಾಲೀಕ ನಗದು ರೂಪದಲ್ಲಿ ಸಂಬಳ ಮತ್ತು ಭತ್ಯೆ ನೀಡುತ್ತಿದ್ದ. ನನ್ನ ಮಾಲೀಕ ನನಗೆ ಪ್ರತಿ ತಿಂಗಳು ಸಂಬಳ ಮತ್ತು ಭತ್ಯೆಯನ್ನು ನೀಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಹೆಚ್ಚಿಗೆ ಪರಿಹಾರ ಪಡೆಯುವ ಉದ್ದೇಶದಿಂದ ನನಗೆ ಪ್ರತಿ ತಿಂಗಳು ರೂ.25,000/- ಸಂಬಳ ಹಾಗೂ ಪ್ರತಿದಿನ ರೂ.500/- ಭತ್ಯೆ ನೀಡುತ್ತಿದ್ದರು ಹಾಗೂ ನಾನು 1 ನೇ ಎದುರುದಾರನ ಬಳಿ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನನಗೀಗ 32 ವರ್ಷ ವಯಸ್ಸು. ಅಪಘಾತದ ಸಮಯದಲ್ಲಿ ನನಗೆ 42 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು 1992 ರಲ್ಲಿ ಜನಿಸಿರುತ್ತೇನೆಂದು ನುಡಿಯುತ್ತಾರೆ. ಅಪಘಾತದ ದಿನದಂದು ನಾನು ಕಲ್ಬುರ್ಗಿಯಿಂದ ಬೇಳೆ ತುಂಬಿಕೊಂಡು ಹೋಗಿ ಬಳ್ಳಾರಿಯಲ್ಲಿ ಬೇಳೆ ಮಾಲನ್ನು ಖಾಲಿ ಮಾಡಿಸಿ ವಾಪಾಸು ಬರುತ್ತಿದ್ದೆ. ಸದರಿ ಬೇಳೆ ಮಾಲನ್ನು ಕಲ್ಬುರ್ಗಿಯ ಯಾವ ಮಿಲ್ ನಿಂದ ತುಂಬಿಕೊಂಡು ಹೋಗುತ್ತಿದ್ದೆ ಅಂತಾ ಹೇಳಲು ಬರುವುದಿಲ್ಲ. ನಾನು ಆ ದಿನ ಬೇಳೆ ಮಾಲನ್ನು ಲಾರಿಯಲ್ಲಿ ತುಂಬಿಕೊಂಡಿದ್ದು ಬಳ್ಳಾರಿಯಲ್ಲಿ ಯಾವ ಅಂಗಡಿಯಲ್ಲಿ ಖಾಲಿ ಮಾಡಿಸಿರುತ್ತೇನೆಂಬ ಬಗ್ಗೆ ದಾಖಲಾತಿ ಇಲ್ಲ.

ನಾನು ಲಾರಿ ಸಂಖ್ಯೆ ಎಂ.ಪಿ-06 ಹೆಚ್.ಸಿ-1382ರ ಚಾಲಕನಾಗಿರಲಿಲ್ಲ ಆದರೆ ಪ್ರಯಾಣಿಕನಾಗಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಅಪಘಾತವು ಬೆಳಗಿನ ಜಾವ 04-00 ಗಂಟೆಗೆ ಲಾರಿ ಚಾಲಕ ರಾಜಶೇಖರ ಮರಕ್ಕೆ ಹೋಗಿ ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುತ್ತದೆ. ಅಪಘಾತದ ಸಮಯದಲ್ಲಿ ನಮ್ಮ ಲಾರಿಯ ಹಿಂದಿನಿಂದ ಬಸ್ ಬರುತ್ತಿತ್ತು ಆಗ ನಮ್ಮ ಲಾರಿ ಚಾಲಕ ಲಾರಿಯನ್ನು ವೇಗವಾಗಿ ಚಲಾಯಿಸಿ ಮರಕ್ಕೆ ಡಿಕ್ಕಿಪಡಿಸಿರುತ್ತಾನೆ. ಲಾರಿಯನ್ನು ರಾಜಶೇಖರ ಚಾಲನೆ ಮಾಡುತ್ತಿದ್ದರೆ ನೀವು ಲಾರಿಯಲ್ಲಿ ಏನಂತ ಪ್ರಯಾಣಿಸುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಲಾರಿ ಕ್ಲೀನರ್ ಕಂ ಪ್ರಯಾಣಿಸುತ್ತಿದ್ದೆ ಹಾಗೂ ರಾಜಶೇಖರ ಮತ್ತು ನಾನು ಇಬ್ಬರು ಚಾಲಕರು ಎಂದು ನುಡಿಯುತ್ತಾರೆ.

ಲಾರಿ ಮಾಲೀಕ ಲಾರಿಗೆ ವಿಮೆಯನ್ನು ಒಬ್ಬ ಚಾಲಕನಿಗೆ ಮಾತ್ರ ಪಡೆದುಕೊಂಡಿರುತ್ತಾರೆ ಇಬ್ಬರು ಚಾಲಕರಿಗೆ ಪಡೆದುಕೊಂಡಿರುವುದಿಲ್ಲ ಎಂಬ ಪ್ರಶ್ನೆಯನ್ನು 4-5 ಬಾರಿ ಕೇಳಿದರೂ ಸಹ ಸಾಕ್ಷಿ ಸರಿಯಾಗಿ ಉತ್ತರಿಸದೇ ದೂರದ ಪ್ರಯಾಣ ಇದ್ದ ಕಾರಣ ಇಬ್ಬರು ಚಾಲಕರಿದ್ದೆವು ಎಂದು ನುಡಿಯುತ್ತಾರೆ. ಸದರಿ ಲಾರಿಯ ಮೇಲೆ ಇಬ್ಬರು ಚಾಲಕರಿದ್ದೆವು ಎಂದು ನನ್ನ ಅರ್ಜಿಯ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹಾಗೂ ಪೊಲೀಸ್ ದಾಖಲೆಗಳಲ್ಲಿ ನಮೂದಾಗಿದೆ ಅಪಘಾತದ ದಿನದಂದು ನಾನು ಲಾರಿಯಲ್ಲಿ ಅನಧಿಕೃತ ಪ್ರಯಾಣಿಕನಾಗಿ ಪ್ರಯಾಣಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅನಧಿಕೃತ ಪ್ರಯಾಣಿಕನಾಗಿ ಲಾರಿಯಲ್ಲಿ ಪ್ರಯಾಣಿಸುತ್ತಿದ್ದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಅಪಘಾತವು ದಿನಾಂಕ 27-04-2021ರಂದು ಆಗಿರುತ್ತದೆ. ದೂರನ್ನು ದಿನಾಂಕ 07-05-2021ರಂದು ನೀಡಿರುತ್ತೇನೆ. ಅಪಘಾತವಾದ ತಕ್ಷಣ ಏಕೆ ದೂರನ್ನು ನೀಡಿಲ್ಲ ಎಂದರೆ ಸಾಕ್ಷಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ಅಪಘಾತವಾದ ನಂತರ ನಾನು ಕುರಾಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಕುರಾಳ ಆಸ್ಪತ್ರೆಯಲ್ಲಿ 4-5 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಆಸ್ಪತ್ರೆಯ ಖರ್ಚು ಸುಮಾರು ರೂ.4,50,000/- ಆಗಿರುತ್ತದೆ.

ನಿಪಿ-9ರ ಕ್ಯಾಶ್ ಮೆಮೊ ದಾಖಲೆಯು ಆಸ್ಪತ್ರೆಯ ಅಂತಿಮ ಬಿಲ್ ಅಲ್ಲ ಎಂದರೆ ಸಾಕ್ಷಿ ಆಸ್ಪತ್ರೆಯವರು ನೀಡಿದ ದಾಖಲೆಯನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನಿಪಿ-9ರ ದಾಖಲೆಯಲ್ಲಿ ರೋಗಿ/ಗಾಯಾಳು ಸಂಖ್ಯೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-9ರ ದಾಖಲೆಯನ್ನು ಹೆಚ್ಚಿಗೆ ಪರಿಹಾರ ಸಿಗಬೇಕೆಂದು ಭಾವಿಸಿ ಸೃಷ್ಠಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಸಲ್ಲಿಸಿದ ಆಸ್ಪತ್ರೆಯ ಎಲ್ಲಾ ದಾಖಲೆಗಳನ್ನು ಖೊಟ್ಟಿಯಾಗಿ ಸೃಷ್ಠಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ನಿಪಿ-33ರ ಅಂಗನ್ಯೂನತಾ ಪ್ರಮಾಣ ಪತ್ರವನ್ನು ನಮಗೆ ಬೇಕಾದ ಹಾಗೆ ಬರೆಯಿಸಿಕೊಂಡು ಬಂದು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ಹೆಚ್ಚಿಗೆ ಪರಿಹಾರ ಧನ ಸಿಗಲೆಂದು

ದಾಖಲಾತಿಗಳನ್ನು ಸೃಷ್ಠಿಸಿಕೊಂಡು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ